ಮಳೆ ತನ್ನ ಮೊದಲ ಪಾದವೂರುವಾಗ ನನ್ನ ಸ್ಮೃತಿಕೋಶವು ತೆರೆದುಕೊಳ್ಳುತ್ತದೆ. ಕಾರ್ಗಾಲಕ್ಕೆ ತಿಂಗಳಿರುವಾಗಲೇ ಮೆದೆಹುಲ್ಲನ್ನು ಕೊಯ್ದು ತಂದು ಕೊಟ್ಟಿಗೆ ಛಾವಣಿಗೆ ಹೊದೆಸುವುದು; ಹೆಂಚುಗಳ ಮೇಲೆ ಕೈಯಾಡಿಸುವುದು; ಸೌದೆ ಸೀಳಿ ಕೊಟ್ಟಿಗೆಯಲ್ಲಿ ಒಟ್ಟುವುದು; ಬಣವೆಗೆ ನೀರಿಳಿಯದಂತೆ ಗರಿ ಹಾಸುವುದು; ಗಲ್ಲಿನೀರು ತಿಪ್ಪೆಗೆ ಹೋಗುವಂತೆ ಕಾಲುವೆ ತೋಡುವುದು – ವಾರ್ಷಿಕ ಕರ್ಮಗಳ ಸರಣಿಯೇ ಶುರುವಾಗುತ್ತಿತ್ತು. ಅಪ್ಪ ನೇಗಿಲು ಕುಂಟೆ ಹೊರಗಿಟ್ಟು ಕಟಕೊಟ ಮಾಡಿ ಸರಿಪಡಿಸುತ್ತಿದ್ದನು. ಅಮ್ಮ ಹಪ್ಪಳ ಸಂಡಿಗೆ ಕೊರಬಾಡು ಮಾಡಿ ಡಬ್ಬದಲ್ಲಿ ತುಂಬುತ್ತಿದ್ದಳು. ನಾವು ಸ್ಕೂಲಿಗೆ ಪಾಟಿಚೀಲ ರೈನುಕೋಟು ತಯಾರಿ ಮಾಡಿಕೊಳ್ಳುತ್ತಿದ್ದೆವು. ವರ್ಷಋತು ನಿರ್ದೇಶಕನಂತೆ ಬಂದು ಕೆಲಸ ಕಾರ್ಯ, ಉಡುಪು, ಆಹಾರ ಪಾನೀಯಗಳನ್ನು ನಾಟಕೀಯವಾಗಿ ಬದಲಿಸುತ್ತಿತ್ತು. ಆಗ ಮಿರ್ಚಿ, ಹುರಿಗಾಳು, ಹಪ್ಪಳ, ಕೊರಬಾಡುಗಳಿಗೆ ದಿಢೀರ್ ಮಾನ್ಯತೆ; ಒಲೆಯ ಆಸುಪಾಸಿನ ಜಾಗಕ್ಕೆ ಬೇಡಿಕೆ; ಕೊಡೆ, ಉಣ್ಣೆಟೋಪಿ, ಸ್ವೆಟರು, ಕಂಬಳಿಗೊಪ್ಪೆ, ಗಂಬೂಟು ಅಜ್ಞಾತವಾಸ ಮುಗಿಸಿ ಹೊರಗಿಣುಕುತ್ತವೆ. ಎಲ್ಲವೂ ಸಂಗೀತಗೋಷ್ಠಿ ಶುರುವಾಗುವ ಮುನ್ನ ತಂಬೂರಿ ಶ್ರುತಿಗೊಳಿಸುವ, ಸುತ್ತಿಗೆಯಿಂದ ತಬಲದ ಚರ್ಮಪಟ್ಟಿ ಬಿಗಿಗೊಳಿಸುವ ಕೆಲಸಗಳು.

ಆದರೆ ಈ ವರ್ಷಸಂಗೀತದಲ್ಲಿ ಬೇಕಾದಷ್ಟು ಅಪಸ್ವರ ಇರುತ್ತಿದ್ದವು. ನಾವು ಪಾತ್ರೆಗಳನ್ನು ಸೋರುವ ಜಾಗಗಳಿಗಿಟ್ಟು ಟಪಾಟಣ್ ಸಪ್ಪಳ ಆಲಿಸುತ್ತಿದ್ದೆವು. (ಶರೀಫರು ಭಾವಿಸಿದಂತೆ ಮನೆಯ ಮಾಳಿಗೆ ಸೋರುತ್ತಿದ್ದುದು ಅಜ್ಞಾನದಿಂದಲ್ಲ.) ಅಪ್ಪನ ಕುಲುಮೆ ಕರ್ಫ್ಯೂ ವಿಧಿಸಿದಂತೆ ಬಂದಾಗುತ್ತಿತ್ತು. ಹೊಲದ ಪೀಕು ಶೀತಹಿಡಿದು ಹಳದಿಯಾಗುತ್ತಿತ್ತು. ಗೋಡೆಗೆ ಪಾಚಿ ಹಬ್ಬುತ್ತಿತ್ತು. ಒಗೆದ ಬಟ್ಟೆ ಒಣಗದೆ ದುರ್ವಾಸನೆ. ಕಾಲ್ಬೆರಳ ಸಂದಿಯಲ್ಲಿ ಕೆಸರಗಾಯ. 'ಸ್ವಾತಿಮಳೆ ಹೇತೇನೆಂದ್ರೂ ಬಿಡಲ್ಲ' ಮಾತಿನ ಅರ್ಥ ಮನೆಯೊಳಗೆ ಕಕ್ಕಸ್ಸು ಕಟ್ಟಿಕೊಂಡಿರುವವರಿಗೆ ಆಗುವುದು ಸಾಧ್ಯವಿಲ್ಲ. ಎಲ್ಲಕ್ಕಿಂತ ಕಷ್ಟ ಕೂಲಿಕಾರರದು. ಅವರನ್ನು ಕರೆಯುವವರಿಲ್ಲ. ಕುಂತುಣ್ಣಲು ದವಸವಿಲ್ಲ. ಹೊಲದಲ್ಲಿ ಪೈರು ಕೈಗೆ ಬಂದಿಲ್ಲ. ಆಗ ನಾವು ತಿಪ್ಪೆಯ ಮೇಲೆ ಹಚ್ಚಗೆ ಬೆಳೆದ ಮುಳ್ಳರಿವೆ ಕೊಯ್ದು ತರುತ್ತಿದ್ದೆವು. ಅಮ್ಮ ಅದರ ಕಂಕುಳ ಮುಳ್ಳನ್ನು ಕಿತ್ತು ಉಪ್ಪು ಮೆಣಸು ಹಾಕಿ ಬೇಯಿಸುತ್ತಿದ್ದಳು. ಆಪದ್ಧನದಂತೆ ಅಡಗಿಸಿದ್ದ ದವಸವೆಲ್ಲ ಮುಗಿದ ಬಳಿಕ, ಅವಳ ವಾಲೆಬುಗುಡಿ ಅಡಮಾನಕ್ಕೆ ಹೊರಡುತ್ತಿದ್ದವು. ಒಮ್ಮೆ ನನಗೆ ರೈಲ್ವೆ ಪಾಸನ್ನು ನವೀಕರಿಸಲು ಐದು ರೂಪಾಯಿ ಸಿಗದೆ ಕಾಲೇಜು ತಪ್ಪಿಸಿ ಮನೆಯಲ್ಲೇ ಉಳಿದಿದ್ದೆ. ಅಪ್ಪನಿಗೆ ಗೊತ್ತಾಗಿದ್ದೇ 'ಟೇಶನ್ನಿಗೆ ಬಂದಿರು' ಎಂದು ಹೊರಬಿದ್ದ. ನಾನು ಸ್ಟೇಶನ್ ತಲುಪುವಾಗ ಆತ ತೊಪ್ಪೆಯಾಗಿ ಗೇಟಿನಲ್ಲಿ ನಿಂತಿದ್ದ. ಕೈಯಲ್ಲಿ ಒದ್ದೆಮುದ್ದೆಯಾದ ಹಸಿರುನೋಟು. ನೆಲವಾಸಿಗಳ ಬವಣೆ ಸೆಣಸಾಟ ಪ್ರೀತಿಗಳನ್ನು ಬಹಿರಂಗಗೊಳಿಸಲೆಂದೇ ಬರುತ್ತದೆಯೇ ಈ ಮಳೆ?



ಕಚ್ಚಿಕೊಂಡ ಮಳೆ ನಿಂತು ತುಸು ಹೊರಪುಗೊಟ್ಟರೆ ಸಗ್ಗದ ಬಾಗಿಲು ತೆರೆದಂತಾಗುತ್ತಿತ್ತು. ಬೂದಿಬಡುಕ ಆಗಸ ನೋಡಿ ಸಾಕಾಗಿದ್ದ ಮನಸ್ಸು ಸೂರ್ಯನ ಬೆಳ್ಳಿಮುಖ ಕಂಡು ಅರಳುತ್ತದೆ. ಕೊಡಗಿನಲ್ಲಿರುವಾಗ ಮಳೆಬಿದ್ದ ಮಾರನೇ ಬೆಳಿಗ್ಗೆ ನಾನುಬಾನು, ತಿರುಗಾಟಕ್ಕೆ ಹೊರಟಿದ್ದೆವು. ಗೊಪ್ಪೆಹಾಕಿಕೊಂಡು ಕೆಲಸಗಾರರು ಗುದ್ದಲಿ ಕೊಡಲಿ ಬುಟ್ಟಿ ಹಿಡಿದು ಲೈನಿನ ಮನೆಗಳಿಂದ ಏರುತ್ತ ಇರುವೆ ಸಾಲಾಗಿ ಎದುರಾದರು. ಕೆಲವರು ಪ್ಲಾಸ್ಟಿಕ್ ಹಾಳೆ ಸುತ್ತಿಕೊಂಡು, ಕಾಲಿಗೆ ಗಂಶೂ ಹಾಕಿಕೊಂಡು ಪ್ಯಾಕಾಗಿದ್ದರು. ಹೆಂಗಸರು ತಾಂಬೂಲ ಹಾಕಿ ಬಾಯಿ ಕೆಂಪಾಗಿ ಮಲ್ಲಿಗೆ ಮುಡಿದಿದ್ದರು. ಅವರಿಗೆ ಹೋಲಿಸಿದರೆ, ಗಂಡಸರು ಬಹುಶಃ ಕುಡಿಕುಡಿದು ಕೆನ್ನೆಬತ್ತಿ ಮುಖಕ್ಷೌರ ಬೆಳೆದು ಚಲಿಸುವ ಕಳೇಬರಗಳಂತೆ ಕಂಡರು. ಅವರೆಲ್ಲ ಜರಿದ ಗುಡ್ಡೆಯ ಮಣ್ಣೆತ್ತಲು, ಕಾಫಿಗಿಡದ ಮೇಲೆ ಬಿದ್ದಿದ್ದ ಮರ ಕಡಿಯಲು ಹೊರಟಿದ್ದರು. ದೊಡ್ಡಮಳೆ ನಿಂತೊಡನೆ ಅಪ್ಪ ಕೂಡ ಹೊಲಕ್ಕೆ ನೀರು ನುಗ್ಗಿತೊ, ಬದುಗಳು ಒಡೆದವೊ ಎಂದು ಗುದ್ದಲಿ ಹಿಡಿದು ಓಡುತ್ತಿದ್ದನು. ಆಗ ನಮ್ಮೂರಂತೂ ಅಕ್ಷರಶಃ ಯುದ್ಧಭೂಮಿ. ಗೋಡೆ ಕುಸಿದ, ಛತ್ತು ಹಾರಿಹೋದ, ಒಪ್ಪಾರ ಬಾಗಿದ, ಮರ ಬಿದ್ದ, ಮುದುಕಿ ಪ್ರಾಣಬಿಟ್ಟ ದೃಶ್ಯಗಳನ್ನು ಜನ ತಪಾಸಣೆ ಮಾಡುತ್ತ ತಿರುಗುತ್ತಿದ್ದರು. ಪತ್ರಿಕೆಯ ತುಂಬ ಏರಿ ಒಡೆದ, ಗದ್ದೆ ಕೊಚ್ಚಿಹೋದ, ಕಡಲ್ಕೊರೆತದಲ್ಲಿ ತೆಂಗಿನಮರ ಉರುಳಿದ ಸುದ್ದಿಗಳು.

ಭೂಮಿಗಿಂತ ದೊಡ್ಡದಾಗಿರುವ ಎಷ್ಟೊ ಗ್ರಹಗಳಲ್ಲಿ ಮಳೆಯಿಲ್ಲವಂತೆ. ಎಂತಲೇ ಅಲ್ಲಿ ಈ ವರ್ಣರಂಜಿತ ಬದುಕಿಲ್ಲ. ಭೂಮಿ ಮೇಲೆ ಮಾತ್ರ ಮಳೆಯಿಂದ ಮಣ್ಣಿನಗಂಧ ಸೃಷ್ಟಿಯಾಗುತ್ತದೆ. ಸತ್ತಂತೆ ನೆಲಕ್ಕಂಟಿದ ಹುಲ್ಲು ಚಿಗುರುತ್ತದೆ. ಸುಪ್ತಧ್ಯಾನದಲ್ಲಿದ್ದ ಹೆಸರಿಲ್ಲದ ಬಿತ್ತಗಳು ಮೊಳಕೆಯೊಡೆದು ತಲೆಯೆತ್ತುತ್ತವೆ. ಬತ್ತಿದ ಕೆರೆ ಹೊಳೆವ ಕನ್ನಡಿಯಾಗುತ್ತದೆ. ಹೊಳೆಗೆ ಹೊಸನೀರು ನುಗ್ಗುತ್ತದೆ. ಪೈರು ಬೆಳೆದು ಹೂವಾಗಿ ಹುಲ್ಲಾಗಿ ದವಸವಾಗಿ ಮನೆಗೆ ಬರುತ್ತದೆ. ಹನಿಮುತ್ತಿನ ಮೂಗುತಿ ಮುಡಿದ ಎಲೆಗಳು ಕಂಗೊಳಿಸುತ್ತವೆ. ಬಿಸಿಲೂ ಮಳೆಯೂ ಕೂಡಿ 'ಮೋಡದ ನಾಡಿನ ಬಾಗಿಲಿಗೆ ಕಮಾನು ಕಟ್ಟು'ವ ಮಳೆಬಿಲ್ಲು ಕಟ್ಟುತ್ತವೆ. ಬೆಟ್ಟಗಳು ಮಂಜಿನ ಚಾದರ ಹೊದೆಯುವವು. ಕಣಿವೆಗಳು ಮಂಜಿನ ಉಂಡೆ ಕಟ್ಟಿ ಆಗಸಕ್ಕೆ ಎಸೆಯುವವು. ಬೆದೆಮುಗಿದು ಗಾನ ನಿಲ್ಲಿಸಿದ ಮಂಡೂಕಗಳು ಮೌನಕ್ಕೆ ಸಲ್ಲುವವು; ನೆಂದ ಗರಿಯನ್ನು ಕೊಡವುತ್ತ ಕೊಂಬೆಗಳ ಮೇಲೆ ಕೂತು ಮೈಯಾರಿಸಿಕೊಳ್ಳುವ ಹಕ್ಕಿ: ಬಿಲದೊಳಗೆ ನುಗ್ಗಿದ ನೀರಿಗೆ ಹೊರಬಂದು ಕಡ್ಡಿಯ ಮೇಲೆ ಜೀವಹಿಡಿದು ತೇಲುವ ಇರುವೆ; ಮರಿಗಳನ್ನು ತೋಳರೆಕ್ಕೆಯೊಳಗೆ ಸೇರಿಸಿಕೊಂಡು ನಿಂತ ತಾಯಿಕೋಳಿ; ಜುಳುಜುಳಿಸುವ ತೋಡು; ಕುಡುಕರಂತೆ ಅಡ್ಡಹಾಯುವ ಹಳ್ಳಗಳ ಭೋರ್ಗರೆತ; ಕೋಡಿಯಲ್ಲಿ ಹತ್ತುಮೀನು ಕಡಿಯಲು ಸೈನಿಕರಂತೆ ನಿಂತ ಹುಡುಗರು; ಅಣಬೆ ಕೀಳಲು ಕಾಡಿಗೆ ಬಿದ್ದ ತರುಣರು. ನನ್ನ ಪಾಲಿಗೆ ಮಳೆ ಎಂದೂ ಒಂಟಿಯಲ್ಲ. ಗುಡುಗುಸಿಡಿಲು, ಗಾಳಿಮಿಂಚು, ಬಿದ್ದಗೋಡೆಉರುಳಿದ ಮರ, ರಾಗ್ ಮೇಘಮಲ್ಹಾರ, ಚರಾಚರದಲ್ಲೂ ಜೀವಸಂಚಾರ, ಕೊಚ್ಚಿಹೋದ ಹೊಲಹಬ್ಬಿದ ಹಸಿರು, ಕೊಡೆ ಕಂಬಳಿಕೊಪ್ಪೆ, ಕಪ್ಪೆಹಾವುಇಂಬಳ, ಅಮ್ಮನ 'ರೇ' ಕೂಗುಅಪ್ಪನ ಕೈಯಲ್ಲಿರುವ ನೆಂದನೋಟು, ಆಲಿಕಲ್ಲು ಕಾಮನಬಿಲ್ಲು. ಅದೊಂದು ಗೊಂಚಲುಚಿತ್ರ.

ಸುಡುಬಿಸಿಲಿಗೆ ಬಳಲಿದ ಜನ ಮಳೆಯನ್ನು ಆರ್ತವಾಗಿ ಆಹ್ವಾನಿಸುವರು; ಅದು ಆಗಮಿಸಿದ ಹೊಸತರಲ್ಲಿ ಬೆದೆಹತ್ತಿದ ಮಣಕದಂತೆ ಕುಣಿದಾಡುವರು. ಅದು ಅಬ್ಬರಿಸುವಾಗ ಪೆಟ್ಟುತಿಂದ ಮಕ್ಕಳಂತೆ ಅಳಲುವರು; ಕಚ್ಚಿ ಕೂತಾಗ ಬಿಡಾರಬಿಟ್ಟ ನಂಟರನ್ನು ಬೀಳ್ಕೊಡುವಂತೆ ತವಕಿಸಿ ನಿಟ್ಟುಸಿರು ಬಿಡುವರು. ಈ ದ್ವಂದ್ವೋಪಚಾರ ಮಳೆಗೆ ಮಾತ್ರವೇ? ಲೋಕದ ಸಮಸ್ತ ಜೀವಿಗಳಿಗೂ ಅಲ್ಲವೇ? ನನ್ನ ಪ್ರಕಾರ ಬೀಳ್ಕೊಡಿಗೆಯ ತೆರಪಿಲ್ಲದ ಬದುಕೊಂದು ಬದುಕೇ ಅಲ್ಲ. ಬೀಳ್ಕೊಂಡ ಕೆಲವರಾದರೂ ನಕ್ಷತ್ರಗಳಾಗುವುದನ್ನು ಮರೆಯುವಂತಿಲ್ಲ. ನಮ್ಮ ಮಳೆಗಳೆಲ್ಲ ನಕ್ಷತ್ರಗಳ ಹೆಸರಲ್ಲಿವೆಮೃಗಶಿರಾ, ಸ್ವಾತಿ, ಭರಣಿ, ರೋಹಿಣಿ, ಹಸ್ತಾ, ಚಿತ್ರಾ. ಪ್ರೀತಿವಂಚಿತನಾದ ರಾಜಕುಮಾರ ಧ್ರುವ ನಕ್ಷತ್ರವಾದನು; ಅತ್ತೆಕಾಟ ತಡೆಯಲಾರದೆ ಉತ್ತರಾದೇವಿ ಮನೆಬಿಟ್ಟು ಉತ್ತರಿ ಮಳೆಯಾಗಿ ಮುಗಿಲೂರಲ್ಲಿ ನೆಲೆಸಿದಳು. ವಿಶೇಷತೆ ಇರುವುದು, ಮನುಷ್ಯರು ಲೋಕದ ಬಾಳಿಗೆ ಬೇಸತ್ತು ಆಗಸದ ತಾರೆಗಳಾಗುವುದರಲ್ಲಿ ಅಲ್ಲ; ಆಗಸದ ಏಕಾಂತ ಬದುಕು ಬೇಸರವಾಗಿ ನೀರಾಗಿ ಬೆಳಕಾಗಿ ಮತ್ತೆ ನೆಲಕ್ಕಿಳಿಯುವುದರಲ್ಲಿ. ಎಂತಲೇ, ಮಳೆ ಬರುವ ಕಾಲಕ್ಕೆ ಒಳಗೆ ಕೂರೆಂದರೆ ಹೇಗೆ ಸಾಧ್ಯ? ನನಗಂತೂ ಇಳೆಯೊಳಗೆ ಜಳಕವಾಡದೆ ಸಮಾಧಾನವಿಲ್ಲ.

ಪ್ರತಿಕ್ರಿಯಿಸಿ: feedback@sudha.co.in